ಇ. ಬಂದಿದೆ, ಟಾಂ ಟಾಂ ಪೆದ್ದ ಗುರುವಾ ರೆಡ್ಡಿ ಕನ್ಸ್ಟ್ರಕ್ಷನ್ (ಪ್ರೈ) ಲಿ.

ಈ. ಈ ಕಾಮಗಾರಿಗೆ ಗುತ್ತಿಗೆ ಕರಾರಿನ ಪ್ರಕಾರ ನಿಗಧಿಪಡಿಸಿದ ಹಣ ರೂ.9,55,62,915/- (94-95ನೇ ಸಾಲಿನ ದರಪಟ್ಟಿಯಂತೆ) ಆಗಿದ್ದು ಹೆಚ್ಚುವರಿ ಪ್ರಮಾಣಸೇರಿದಂತೆ 2/2000ರವರೆಗೆ ರೂ. 16,64,59,000/- ಪಾವತಿ ಮಾಡಲಾಗಿದೆ.

ರಾಜ್ಯದಲ್ಲಿರುವ ಕೆರೆಗಳ ಒತ್ತುವರಿ ಬಗ್ಗೆ.

2205(2816)

ಶ್ರೀ ಚಂದ್ರಶೇಖರಪ್ಪ ಹೆಚ್.ಎಂ(ಶಿವಮೊಗ್ಗ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೆರೆ ಒತ್ತುವರಿ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ.

ಆ) ಕೆರೆ ದುರಸ್ತಿ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ರಾಜ್ಯದಲ್ಲಿ ಒಟ್ಟು 36,666 ಕೆರೆಗಳಿದ್ದು, ಅವುಗಳಲ್ಲಿ ಕೆಲವು ಒತ್ತುವರಿ ಆಗಿರುತ್ತದೆ. ಇಂತಹ ಕೆರೆಗಳನ್ನು ಗುರುತಿಸಲು ಎಲ್ಲಾ ಕೆರೆಗಳ ಸರ್ವೆ ಮಾಡಿಸುವ ಕಾರ್ಯಕ್ರಮ ಕೈಗೊಂಡಿದೆ. ಸರ್ವೆ ವರದಿ ಬಂದ ನಂತರದಲ್ಲಿ ಒತ್ತುವರಿ ಕೆರೆಗಳನ್ನು: ಜಾಗವನ್ನು ನಿಯಮಾನುಸಾರ ಹಾಗೂ ಪೋಲಿಸ್ ಸಹಾಯದೊಂದಿಗೆ ತೆರವುಗೊಳಿಸಲು ಉಗ್ರ ಕ್ರಮ ಕೈಗೊಳ್ಳಲಾಗುವುದು.

ಆ) ರಾಜ್ಯದಲ್ಲಿನ ಕೆರೆಗಳಲ್ಲಿ ಬಹಳಷ್ಟು ಪುರಾತನ ಕೆರೆಗಳಾಗಿವೆ. ಬಹಳಷ್ಟು ಕೆರೆಗಳಲ್ಲಿ ಹೂಳು ತುಂಬಿದ್ದು, ನೀರಿನ ಸಾಮರ್ಥ್ಯ ಕಳೆದು ಕೊಂಡಿದೆ. ಇಂತಹ ಕೆರೆಗಳನ್ನು ಗುರುತಿಸಿ, ಕೆರೆಗಳ ದುರಸ್ತಿ ಹಾಗೂ ಹೂಳು ತೆಗೆಯಲು 5 ವರ್ಷಗಳ ಸಮಗ್ರ ಯೋಜನೆಯೊಂದನ್ನು ರೂಪಿಸುತ್ತಿದ್ದು, ಇದಕ್ಕಾಗಿ ವಿಶ್ವಬ್ಯಾಂಕ್‌ನಿಂದ ಆರ್ಥಿಕ ಸಾಲದ ನೆರವನ್ನು ಸಹ ಪಡೆಯಲು ಯೋಚಿಸುತ್ತಿದೆ.

ರಾಜ್ಯದಲ್ಲಿ ಗಣಕೀಕರಣಗೊಳಿಸಿದ ಪಡಿತರ ಚೀಟಿಯ ವಿತರಣೆ.

2206(2911)

ಶ್ರೀ ದಿನೇಶ್ ಗುಂಡೂರಾವ್(ಗಾಂಧಿನಗರ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಂಪ್ಯೂಟರ್ ಪಡಿತರ ಚೀಟಿ ವಿತರಿಸುವ ಯೋಜನೆಯಿಂದಾಗಿ ಹೊಸ ಪಡಿತರ ಚೀಟಿ ವಿತರಣೆಯನ್ನು ಸ್ಥಗಿತಗೊಳಿಸಿರುವುದು ನಿಜವೆ.

ಆ) ಹಾಗಿದ್ದಲ್ಲಿ ಈ ಅರ್ಜಿದಾರರಿಗೆ ಪಡಿತರ ಪದಾರ್ಥಗಳನ್ನು ವಿತರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು.

ಇ) ಹೊಸದಾಗಿ ಕಂಪ್ಯೂಟರ್ ಪಡಿತರ ಚೀಟಿಗಳನ್ನು ಎಂದಿನಿಂದ ವಿತರಿಸಲಾಗುವುದು?

ಶ್ರೀ ಡಿ.ಜಿ. ಇನಾಂದಾರ (ಆಹಾರ ಮತ್ತು ನಾಗರಿಕ ಸರಬರಾಜು ರಾಜ್ಯ ಸಚಿವರು)

ಅ) ರಾಜ್ಯದಲ್ಲಿ ಗಣಕೀಕರಣಗೊಳಿಸಿದ ಪಡಿತರ ಚೀಟಿ ವಿತರಿಸುವ ಯೋಜನೆಯಿಂದಾಗಿ ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶವನ್ನು ಹೊರತುಪಡಿಸಿ ಉಳಿದ ಯಾವುದೇ ಭಾಗದಲ್ಲೂ ಪಡಿತರ ಚೀಟಿ ವಿತರಣೆಯನ್ನು ಸ್ಥಗಿತಗೊಳಿಸಿಲ್ಲ.

ಬೆಂಗಳೂರು ನಗರ ಅನೌಪಚಾರಿಕ ಪಡಿತರ ಪ್ರದೇಶದಲ್ಲೂ ಇತರೆ ರಾಜ್ಯ: ಪ್ರದೇಶಗಳಿಂದ ವರ್ಗಾವಣೆ ಹೊಂದಿ ಅಧ್ಯಾರ್ಪಣ ಪತ್ರ ಹಾಜರುಪಡಿಸುವ ಕುಟುಂಬಗಳಿಗೆ ಪಡಿತರ ಚೀಟಿಗಳನ್ನು ನೀಡಲಾಗುತ್ತಿದೆ. ಆದರೆ ಬಹಳಷ್ಟು ಕಾಲದಿಂದ ಬೆಂಗಳೂರಿನಲ್ಲಿ ವಾಸ ಇದ್ದು, ಇದುವರೆಗೆ ಪಡಿತರ ಚೀಟಿ ಪಡೆಯದ ಕುಟುಂಬಗಳಿಗೆ ಹೊಸ ಪಡಿತರ ಚೀಟಿ ವಿತರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ಆ) ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ಪಡಿತರ ಪದಾರ್ಥಗಳನ್ನು ಪಡಿತರ ಚೀಟಿಗಳ ಮುಖಾಂತರ ಮಾತ್ರ ಒದಗಿಸುತ್ತಿರುವುದರಿಂದ ಪಡಿತರ ಚೀಟಿ ಕೋರಿ ಅರ್ಜಿ ಸಲ್ಲಿಸುವವರಿಗೆ ಪಡಿತರ ಪದಾರ್ಥಗಳನ್ನು ಒದಗಿಸಲು ಅವಕಾಶ ಇರುವುದಿಲ್ಲ.

ಇ) ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶದಲ್ಲಿ ಗಣಕೀಕರಿಸಿದ ಪಡಿತರ ಚೀಟಿಗಳನ್ನು ವಿತರಿಸುವ ಬಗ್ಗೆ ಟೆಂಡರ್ ಕರೆಯಲಾಗಿದ್ದು ಟೆಂಡರ್ ದಾಖಲೆಗಳನ್ನು ಸಲ್ಲಿಸಲು ದಿನಾಂಕ 20.4.2000 ಕೊನೆಯ ದಿನವಾಗಿರುತ್ತದೆ. ಆ ದಿನ ಟೆಂಡರ್ ದಾಖಲೆಗಳನ್ನು ಸಾರ್ವತ್ರಿಕವಾಗಿ ತೆರೆದಿದ್ದು ನಿಯಮಾನುಸಾರ ಪ್ರಕ್ರಿಯೆಗಳೆಲ್ಲಾ ಪೂರ್ಣಗೊಂಡ ನಂತರ ಗಣಕೀಕರಣಗೊಳಿಸಿದ ಪಡಿತರ ಚೀಟಿಯನ್ನು ಅದಷ್ಟು ಜಾಗ್ರತೆ ವಿತರಿಸಲು ಕ್ರಮವಹಿಸಲಾಗುವುದು.